ಆಯವ್ಯಯದಲ್ಲಿಯ ಬಿಡುಗಡೆ ಮಾಡಿದ ಅನುದಾನ

2826 (4021), ಶ್ರೀ ಮಕಬುಲ್ ಎಸ್.ಬಾಗವಾನ್ (ಬಿಜಾಪುರ ನಗರ)

ಅ) 2014–15ನೇ ಸಾಲಿನಲ್ಲಿ ಸಾರಿಗೆ ಇಲಾಖೆಗೆ ಒಟ್ಟಾರೆ 1489 ಕೋಟಿ ರೂಪಾಯಿಗಳನ್ನು ಒದಗಿಸಲಾಗಿರುವುದು ನಿಜವೇ;

ಆ) ಸಾರಿಗೆ ಇಲಾಖೆಯಲ್ಲಿಯ ವಿವಿಧ ಇಲಾಖೆಗಳಿಗೆ ಮಂಜೂರು ಮಾಡಿರುವ ಅನುದಾನವೆಷ್ಟು;

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಿಜಾಪುರ ವಿಭಾಗಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಿದೆ; ಸಾರಿಗೆ ಇಲಾಖೆ ವಿವಿಧ ಯೋಜನೆಗಳಿಗೆ ಬಿಡುಗಡೆ ಮಾಡಿರು ಅನುದಾನವೆಷ್ಟು;

ಈ) ಹಾಗಾದರೆ, ಬಿಡುಗಡೆಯಾದ ಅನುದಾನದಲ್ಲಿ ಕೈಗೊಂಡಿರುವ ಯೋಜನೆಗಳಾವುವು? (ವಿಜಾಪುರ ಜಿಲ್ಲೆಯ ವಿವರವನ್ನು ಒದಗಿಸುವುದು)?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಮತ್ತು ಆ) 2014–15ನೇ ಸಾಲಿನ ಆಯವ್ಯಯದಲ್ಲಿ ಸಾರಿಗೆ ಸಂಸ್ಥೆಗಳಿಗೆ ಹಾಗೂ ಸಾರಿಗೆ ಆಯುಕ್ತರ ಕಛೇರಿಗೆ ಯೋಜನೇತರ ಹಾಗೂ ಯೋಜನೆ ಅಡಿಯಲ್ಲಿ ಒದಗಿಸಿರುವ ಅನುದಾನ ಈ ಕೆಳಕಂಡತಿದೆ.

ಯೋಜನೇತರ

ಸಂಸ್ಥೆ	ಮೊತ್ತ (₹ ಲಕ್ಷಗಳಲ್ಲಿ)
ಕರಾರಸಾನಿಗಮ	22234.13
ಬೆಂಮಸಾಸಂಸ್ಥೆ	16583.48
ವಾಕರಸಾಸಂಸ್ಥೆ	15011.34
ಈಕರಸಾಸಂಸ್ಥೆ	11360.05

ಯೋಜನೆ

ಸಂಸ್ಥೆ	ಮೊತ್ತ (₹ ಲಕ್ಷಗಳಲ್ಲಿ)
ಕರಾರಸಾನಿಗಮ	1500.00
(SDP)	25500.00
IEBR SUTP & Infrastructure development	640.94
ಬೆಂಮಸಾಸಂಸ್ಥೆ IEBR	25800.00
ವಾಕರಸಾಸಂಸ್ಥೆ (SDP) IEBR	1500.00 5000.00
ಈಕರಸಾಸಂಸ್ಥೆ (SDP) IEBR	1500.00 5000.00
ಡಿಡಿಯುಟಿಟಿಎಲ್	1800.00
ಸಾರಿಗೆ ಇಲಾಖೆ	2402.07

ಇ) 2014–15ನೇ ಸಾಲಿನಲ್ಲಿ ಈ.ಕ.ರ.ಸಾ.ಸಂಸ್ಥೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಬಿಜಾಪುರ ವಿಭಾಗಕ್ಕೆ ₹ 3.00 ಕೋಟಿಗಳ ಅನುದಾನ ಮಂಜೂರು ಮಾಡಲಾಗಿರುತ್ತದೆ.

ಅದೇ ರೀತಿ 2014–15ನೇ ಸಾಲಿನಲ್ಲಿ ಯೋಜನೇತರ ವಿವಿಧ ರೀತಿಯ ಬಸ್ ಪಾಸ್ ವಿತರಣೆಯ ವೆಚ್ಚಕ್ಕಾಗಿ, ಈ.ಕ.ರ.ಸಾ.ಸಂಸ್ಥೆಗೆ ಮಂಜೂರಾದ ಅನುದಾನ ₹ 113.60 ಕೋಟಿಯನ್ನು, ಬಿಜಾಪುರ ವಿಭಾಗ ಒಳಗೊಂಡಂತೆ ಆಯಾ ವಿಭಾಗಗಳಲ್ಲಿ ವಿತರಣೆಯಾಗಿರುವ ಪಾಸ್‌ಗಳ ಸಂಖ್ಯೆಗನುಗುಣವಾಗಿ ಅನುದಾನವನ್ನು ವರ್ಷಾಂತ್ಯಕ್ಕೆ ವಿಭಾಗಗಳಿಗೆ ಹಂಚಿಕೆ ಮಾಡಲಾಗುವುದು. ಕಳೆದ (2013–14) ಸಾಲಿನಲ್ಲಿ ವಿಜಾಪುರ ವಿಭಾಗಕ್ಕೆ ವಿವಿಧ ರೀತಿಯ ಪಾಸ್ ಮರುಪಾವತಿ ಹಣ ₹ 20.41 ಕೋಟಿ ನೀಡಲಾಗಿದೆ.

ಈ) 2014–15ನೇ ಸಾಲಿನಲ್ಲಿ ಈ.ಕ.ರ.ಸಾ.ಸಂಸ್ಥೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನಲ್ಲಿ ಬಿಜಾಪುರ ವಿಭಾಗದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಯ ವಿವರಗಳನ್ನು ಅನುಬಂಧ 'ಅ' ದಲ್ಲಿ ಒದಗಿಸಿದೆ.

"ಎಲ್.ಎ.ಕ್ಯೂ.4021" "ಅನುಬಂಧ-ಆ"

ಕ್ರ. ಸಂ	ಕೆಲಸದ ಹೆಸರು	ಆಂ ಮೊ ರೂ ಲಕ್ಷಗಳಲ್ಲಿ	2014-15ನೇ ಸಾಲಿಗಾಗಿ ಆಚವಡಿಸಲಾದ ಮೊತ್ತ ರೂ ಲಕ್ಷಗಳಲ್ಲಿ	ಶರಾ
01	ಬಬಲೇಶ್ವರದಲ್ಲಿ ಬಸ್ ನಿಲ್ದಾಣವನ್ನು ಪುನರ್ ನಿರ್ಮಿಸುವುದು.	120.00	40.00	ಸದರಿ ಕಾಮಗಾರಿಯನ್ನು ನಿಯಮಾನುಸಾರ ಟೆಂಡರ ಮೂಲಕ ಶ್ರೀ.ಎಮ್.ಎಮ್.ಮುನವಿ ಟೋ.ಇ.ಗು.ಬಿಜಾಪೂರ ರವರಿಗೆ 2.08% ರಷ್ಟು ಕಡಿಮೆ ದರಗಳಿಗೆ ವಹಿಸಿಕೊಡಲಾಗಿರುತ್ತದೆ ಪ್ರಸ್ತುತ ಪಳೆ ತಿಧಿಲಗೊಂಡ ಬಸ್ ನಿಲ್ದಾಣ ಒಡೆದು ಹಾಕುವ ಪ್ರಕ್ರಿಯೆ ಜಾರಿಯಲ್ಲಿದೆ.
02	ತಿಕೋಟಾದಲ್ಲಿ ಬಸ್ ನಿಲ್ದಾಣವನ್ನು ಪುನರ್ ನಿರ್ಮಿಸುವುದು.	125.00	30.00	ಟೆಂಡರ್ ಕರೆಯಲಾಗಿದೆ.
03	ಮುದ್ದೇಬಿಹಾಳ ಬಸ್ ನಿಲ್ದಾಣದ ವಿಸ್ತರಣೆ ಹಾಗೂ ಅಭಿವೃದ್ಧಿ	220.00	70.00	ಸದರಿ ಕಾಮಗಾರಿಯನ್ನು ನಿಯಮಾನುಸಾರ ಟೆಂಡರ ಮೂಲಕ ಶ್ರೀ.ಸಿ.ಎಸ್.ಪಾಟೀಲ ಟೋ ಇ.ಗು.ಬೆಂಗಳೂರು ರವರಿಗೆ 4.79% ರಷ್ಟು ಕೆಟ್ಟಿನ ದರಗಳಿಗೆ ವಹಿಸಿಕೊಡಲಾಗಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ
04	ತಾಳಿಕೋಟೆಯಲ್ಲಿ ಬಸ್ ನಿಲ್ದಾಣವನ್ನು ಪುನರ್ ನಿರ್ಮಿಸುವುದು.	200.00	40.00	ಸದರಿ ಕಾಮಗಾರಿಯನ್ನು ನಿಯಮಾನುಸಾರ ಟೆಂಡರ ಮೂಲಕ ಶ್ರೀ.ಸಿ.ಎಸ್.ಪಾಟೀಲ ಟೋ.ಇ.ಗು.ಬೆಂಗಳೂರು ರವರಿಗೆ 1.13% ರಷ್ಟು ಕಡಿಮೆ ದರಗಳಿಗೆ ವಹಿಸಿಕೊಡಲಾಗಿರುತ್ತದೆ. ಪ್ರಸ್ತುತ ಪಳೆ ತಿಧಿಲಗೊಂಡ ಬಸ್ ನಿಲ್ದಾಣ ಒಡೆದು ಹಾಕುವ ಪ್ರಕ್ರಿಯೆ ಜಾರಿಯಲ್ಲಿದೆ.
05	ಚಡಚಣದಲ್ಲಿ ಬಸ್ ನಿಲ್ದಾಣವನ್ನು ಪುನರ್ ನಿರ್ಮಿಸುವುದು	150.00	30.00	ಸದರಿ ಕಾಮಗಾರಿಯನ್ನು ನಿಯಮಾನುಸಾರ ಟೆಂಡರ ಮೂಲಕ ಶ್ರೀ.ಎಮ್.ಎಮ್.ಮುನವಿ ಟೋ.ಇ.ಗು.ಬಿಜಾಪೂರ ರವರಿಗೆ 0.10% ರಷ್ಟು ಕೆಟ್ಟಿನ ದರಗಳಿಗೆ ವಹಿಸಿಕೊಡಲಾಗಿರುತ್ತದೆ. ಕಾಮಗಾರಿ ಪ್ರಾರಂಭಿಸಬೇಕಿರುತ್ತದೆ
06	ನಿಲವಟಿವಾಡದಲ್ಲಿ ಬಸ್ ನಿಲ್ದಾಣವನ್ನು ವಿಸ್ತರಿಸುವುದು.	120.00	30.00	ಮರು ಟೆಂಡರ್ ಕರೆಯಲಾಗಿದೆ.
07	ಹೂವಿನ ಹಿಪ್ಪರಗಿಯಲ್ಲಿ ನೂತನ ಬಸ್ ನಿಲ್ದಾಣವನ್ನು ನಿರ್ಮಿಸುವುದು.	120.00	30.00	ಸದರಿ ಕಾಮಗಾರಿಯನ್ನು ನಿಯಮಾನುಸಾರ ಟೆಂಡರ ಮೂಲಕ ಶ್ರೀ.ಸಿ.ಎಸ್.ಪಾಟೀಲ ಟೋ ಇ.ಗು.ಬೆಂಗಳೂರು ರವರಿಗೆ 2.40% ರಷ್ಟು ಕೆಟ್ಟಿನ ದರಗಳಿಗೆ ವಹಿಸಿಕೊಂಡಿರುತ್ತದೆ ಪ್ರಸ್ತುತ ಪಳೆ ತಿಧಿಲಗೊಂಡ ಬಸ್ ನಿಲ್ದಾಣ ಒಡೆದು ಹಾಕುವ ಪ್ರಕ್ರಿಯೆ ಜಾರಿಯಲ್ಲಿದೆ.
08	ನಿಡಗುಂದಿ ಬಸ್ ನಿಲ್ದಾಣದ ಅಭಿವೃದ್ಧಿ	50.00	20.00	ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.
09	ಕಲಕೇರಿ ಬಸ್ ನಿಲ್ದಾಣದ ಅಭಿವೃದ್ಧಿ	40.00	10.00	ಪ್ರಸ್ತಾವನೆಯಲ್ಲಿದೆ.
	ಒಟ್ಟು ಮೊತ್ತ	ರೂ	300.00	